ಎಂ.ಕೆ. ರವಿಕುಮಾರ್, ತುಮಕೂರು
*ನಾಯಿ ಗೋಳಾಡಿದರೆ ಅಪಶಕುನ, ಕತ್ತೆ ಕಿರುಚಿದರೆ ಅದೃಷ್ಟ. ರಾಜಕಾರಣಿ ಕಿರುಚಿದರೆ?*



ಕತ್ತೆ ಹೆದರಿ ಓಡುತ್ತದೆ, ನಾಯಿ ಮತ್ತಷ್ಟು ದುಃಖದಿಂದ ಗೋಳಾಡುತ್ತದೆ!

ಎ.ಕೆ. ಪಟ್ಟಾಭಿ, ಬೆಂಗಳೂರು
*ಕಟ್ಟಿಕೊಂಡ ಪತ್ನಿಯನ್ನು ಧರ್ಮಪತ್ನಿ ಎಂದು ಪರಿಚಯಿಸುವ ಬದಲು ಪತ್ನಿ ಎಂದರೆ ಸಾಲದೆ? ಧರ್ಮ ಏಕೆ ಸೇರಿಸುತ್ತಾರೆ?*
ಸೇರಿಸಲಿ ಬಿಡಿ ಸಾರ್. ಈಗಿನ ಕಾಲದಲ್ಲಿ ಧರ್ಮ ಉಳಿದಿರುವುದು ಆ ಪದದಲ್ಲಿ ಮಾತ್ರ!

ಮಲ್ಲನಗೌಡ ಸಿ. ಪಾಟೀಲ, ರಂಭಾಪೂರ
*ಜಗತ್ತಿನಲ್ಲಿ ಅತೀ ಅಗ್ಗವಾಗಿರುವ ವಸ್ತು ಯಾವುದು?*
ತಾಯಿಯ ಪ್ರೀತಿ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಈ ಜಗತ್ತಿನಲ್ಲಿ ಪ್ರಾಮಾಣಿಕತೆಗೆ ಎಲ್ಲಿ ಬೆಲೆ ಸಿಗುತ್ತದೆ?*
ಏಕೆ? ನಿಮ್ಮ ಪ್ರಾಮಾಣಿಕತೆಯನ್ನು ಮಾರಾಟಕ್ಕೆ ಇಟ್ಟಿದ್ದೀರೇನು?

ಸೃಜನ ಜೈನ್, ಹೂವಿನಹಡಗಲಿ
*ಸ್ವಭಾವತಃ ವಿರುದ್ಧ ಗುಣದವರಾಗಿರುವ ನಿಮಗೆ ನಿಮ್ಮವರು ಹೇಗೆ ಜೊತೆಯಾಗಿ ಹೋಗುತ್ತಿದ್ದಾರೆ?*
ಸಮ್ಮಿಶ್ರ ಸರ್ಕಾರದಂತೆ!

ದಿನೇಶ್, ಗುಡ್ಡದೂರು
*ಪ್ರಳಯಕ್ಕೂ, ಪ್ರಣಯಕ್ಕೂ ಇರುವ ವ್ಯತ್ಯಾಸ?*



ಪ್ರಣಯದಲ್ಲಿ ಇಬ್ಬರೇ ಮುಳುಗುತ್ತಾರೆ, ಪ್ರಳಯದಲ್ಲಿ ಇಡೀ ಜಗತ್ತೇ ಮುಳುಗುತ್ತದೆ.

ಎಚ್.ಆರ್. ದೇಸಾಯಿ, ರಾಯಚೂರು
*ಸಿನಿಮಾದ ಹೀರೋ-ಹೀರೋಯಿನ್ ತರಹ ಕುಣಿಯುತ್ತಾ, ಕುಪ್ಪಳಿಸುತ್ತಾ, ಮರ ಸುತ್ತುತ್ತಾ, ಹಾಡುತ್ತಾ ಪ್ರೀತಿಸೋಣ ಅಂದ್ರೆ ಹೆಂಡತಿ ಒಪ್ಪುತ್ತಿಲ್ಲವಲ್ಲಾ?*
ಬೆಪ್ಪು ನೀವು! ಇವನ್ನೆಲ್ಲಾ ಹೆಂಡತಿಗೆ ತಿಳಿಯದಂತೆ ಮಾಡಬೇಕು ರೀ...!

ಮಹಾವೀರ ಕಾಸರ, ಶಿವಮೊಗ್ಗ
*ರಾಜಕಾರಣಿ ಎಂಬುದರ ಅರ್ಥವೇನು?*
ರಾ-ರಾಜ್ಯದ, ಜ-ಜನಗಳನ್ನು, ಕಾ-ಕಾಡುಗಳನ್ನು, ರ-ರಖಮುಗಳನ್ನು, ಣಿ-ಗಣಿಗಳನ್ನು ದೋಚುವವನು!

ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ
*ಹುಡುಗಿಯರನ್ನು ಟಚ್ ಮಾಡಿದರೆ ಸುಮ್ಮನೆ ಇರುವರೆ?*
ಟಚ್ ಮಾಡಿದರೆ ಛಟ್! ನೀವು ಮೇಕಪ್ ಮ್ಯಾನ್ ಆಗಿದ್ದು, ಟಚಪ್ ಆದರೆ ಓಕೆ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ಯಮದೂತರು ಲಂಚ ಪಡೆಯಲು ಆರಂಭಿಸಿದರೆ ಏನಾಗಬಹುದು ಸರ್?*
ಇಡೀ ಭೂಮಿ ಹಣ್ಣುಹಣ್ಣು ಮುದುಕರಿಂದ ಹೌಸ್‌ಫುಲ್!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಜಾಮೀನಿಗೂ (ಅ)ನ್ಯಾಯಾಧೀಶರಿಗೆ ಜಾಮೂನು ತಿನ್ನಿಸಬೇಕೆ?*
ಛೆ! ನರಿ, ತೋಳ, ಹದ್ದುಗಳಿಗೆ ಯಾರೂ ತಿನ್ನಿಸುವುದಿಲ್ಲ; ಅವೇ ಹರಿದು ಮುಕ್ಕುತ್ತವೆ!

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು
*ಹೃದಯದ ಮಾತು ಮೇಲೋ, ಮನಸ್ಸಿನ ಮಾತು ಮೇಲೋ ರಾಮ್‌ಜೀ?*
ಆಡುವುದಕ್ಕೆ ಮನಸ್ಸಿನ ಮಾತು, ಅನುಭವಿಸುವುದಕ್ಕೆ ಹೃದಯದ ಮಾತು!

ಕ.ನ.ಕಾ. ತುಮಕೂರು
*ರಾಂ, ನಿಮ್ಮ ಮೆದುಳಿನ Ram ಎಷ್ಟು ಎಂದು ಹೇಳುತ್ತೀರಾ?*
ಎಷ್ಟೇ ಜಟಿಲವಾದ ಪ್ರಶ್ನೆ ಬಂದರೂ jam ಆಗದಷ್ಟು!

ಮುರಲೀಧರ ಕುಲಕರ್ಣಿ, ಬೀದರ್
*ಹಾಲಿಗೂ, ಆಲ್ಕೋಹಾಲಿಗೂ ಇರುವ ವ್ಯತ್ಯಾಸವೇನು?*
ಹಾಲಿನಿಂದ ಗಟ್ಟಿ. ಆಲ್ಕೋಹಾಲಿನಿಂದ ಟೈಟ್!

ಜಾಕೋಬ್ ಡಿಸೋಜ, ಕುರುವಳ್ಳಿ
*ವ್ಯವಹಾರ ಮತ್ತು ವಿಶ್ವಾಸ ಹೇಗಿರಬೇಕು?*
ವ್ಯವಹಾರ ಕಡಲೆ ತಿಂದು ಕೈತೊಳೆದುಕೊಂಡಂತೆ, ವಿಶ್ವಾಸ ಪುಳ್ಳಂಗಾಯಿ ಉಂಡೆಯಂತೆ!

## ಬಹುಮಾನಿತ ಪ್ರಶ್ನೆ

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ದ್ರವವಸ್ತುಗಳನ್ನು ಲೀಟರ್‌ಗಳಲ್ಲಿ ಅಳೆಯುವಂತೆ ಹೆಂಡವನ್ನೇಕೆ ಲೀಟರ್‌ನಲ್ಲಿ ಅಳೆಯುವುದಿಲ್ಲ?*
ಮಿನಿಲೀಡರ್‌ಗಳು ಹಂಚುವ ವಸ್ತುವಾದ್ದರಿಂದ ಮಿಲಿಲೀಟರ್ರೇ ಸರಿಯಂತೆ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಈ ಪ್ರಪಂಚದಲ್ಲಿ ನಗಲು ಬಾರದ, ಅಳಲು ಬಾರದ ವ್ಯಕ್ತಿಯನ್ನು ಎಲ್ಲಿಯಾದರೂ ನೋಡಿದ್ದೀರಾ?*
ಓ! ಸೀರಿಯಲ್‌ಗಳಲ್ಲಿ ನಟಿಸುತ್ತಿದ್ದೇವೆಂಬ ಭ್ರಮೆ ಇರುವ ಹಲವಾರು ಪಾತ್ರಧಾರಿಗಳಿಗೆ ನಗಲೂ ಬಾರದು, ಅಳಲೂ ಬಾರದು!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಬುದ್ಧಿಯ ವ್ಯವಸಾಯ ಎಂದರೆ?*
ಮನದ ಇಳೆಯ ಹಸನು ಮಾಡಿ, ಗುರುವಚನದ ಬೀಜ ಬಿತ್ತು, ಶ್ರಮದ ನೀರನೆರೆಯುತಿದ್ದು, ಗುಣದ ಬೆಳೆಯ ಪಡೆವುದು!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ಕಲ್ಲು ನಾಗರಕ್ಕೆ ಹಾಲೆರೆವ ಈ ಜನ ನಿಜನಾಗರವನ್ನು ಹೊಡೆದು ಸಾಯಿಸುವರಲ್ಲಾ, ಇದೇನಾ ಭಕ್ತಿ?*



ಸುಮ್ಮನಿರಿ ಸಾರ್; ನಿಜನಾಗರಕ್ಕೂ ಹಾಲೆರೆಯುತ್ತಾ ಕೂತರೆ ಮನೆಯಲ್ಲಿ ಪಾಯಸದ ಬದಲು ವಡೆ ಮಾಡಬೇಕಾದೀತು!

ಭೋ.ಪಾ. ವೆಂಕಟೇಶ್, ಭೋಧನಹೊಸಹಳ್ಳಿ
*ಅನುಭವಕ್ಕಿಂತ ಉತ್ತಮವಾದ ಕೌಶಲ್ಯ ಯಾವುದು?*
ಇನ್ನೊಬ್ಬರ ಅನುಭವದಿಂದ ಕಲಿಯುವುದು!

ಎನ್.ವಿ. ಶ್ರೀನಿವಾಸ್, ಮೈಸೂರು
*ಕಾಲ ಕೆಟ್ಟುಹೋಯಿತು ಎನ್ನುವವರು ಪರಿಹಾರ ಹೇಳುವುದಿಲ್ಲ; ಯಾಕೆ?*
ನೀವೂ ಸರಿಯೇ; ಕಾರು ಕೆಟ್ಹೋಯ್ತು ಅಂತ ಹೇಳೋವ್ರೆಲ್ಲಾ ಮೆಕ್ಯಾನಿಕ್ ಆಗಿರಕ್ಕೆ ಸಾಧ್ಯಾನಾ?

■ ರಾಮ್